# ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ

ಡಿಸೆಂಬರ್ 25, 2000 ದಂದು ನನ್ನ ತಾಯಿಯು ಕ್ರಿಸ್ತನೊಂದಿಗಿರಲು ಆತನ ನಿವಾಸಕ್ಕೆ ಹೊರಟರು. ಆಕೆಯ ಭೂಮಿಯ ಮೇಲಿನ ಅಂತಿಮ ಕ್ಷಣಗಳಲ್ಲಿ ನಾನು, ನನ್ನ ತಂದೆ, ಸಹೋದರಿ ಮತ್ತು ಇತರೆ ಕೆಲವರೊಂದಿಗೆ ಆಕೆಯೊಂದಿಗಿದ್ದೆವು. ಅದು ಸುಮಾರು ಮಧ್ಯಾಹ 4:30ರ ಸಮಯ, ಆಕೆಯು ಉಸಿರಾಡಿದ ಪ್ರತಿಯೊಂದು ಉಸಿರು ಮಹಾ ಪರಿಶ್ರಮದ ಫಲಿತಾಂಶದಂತೆ ಕಂಡು ಬರುತ್ತಿತ್ತು. ಆಮೇಲೆ, ನಿಧಾನವಾಗಿ ಮಿಣುಕುವ ಮೇಣದ ಬತ್ತಿ ಆರಿಹೋಗುವಂತೆ ಆಕೆಯ ಉಸಿರಾಟವು ಕ್ರಮೇಣವಾಗಿ ದುರ್ಬಲ ಮತ್ತು ನಿತ್ರಾಣವಾಗಿ ಕಂಡುಬಂತು. ಕ್ಯಾನ್ಸರ್ ಆಕೆಯ ಶ್ವಾಸಕೋಶವನ್ನು ತಿಂದುಬಿಟ್ಟಿತ್ತು ಮತ್ತು ವೈದ್ಯರು ಆಕೆಯನ್ನು ಗುಣಪಡಿಸಲು ಸಾಧ್ಯವಾಗದಂತಹ ಸ್ಥಿತಿಯಾಗಿತ್ತು. ಅಂತಹ ಕೊನೆಯ ಕ್ಷಣಗಳಲ್ಲಿ ನನ್ನ ಕೈಯಿಂದ ಆಕೆಯ ಕೈಹಿಡಿದು, ಆತ್ಮನಿಂದ ಪ್ರಾರ್ಥಿಸಿದೆನು. ಕರ್ತನಾದ ಯೇಸುವಿನ ಮಾತುಗಳಾದ ''ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ'' (ಯೋಹಾನ 11:25) ಎಂಬುದು ತಕ್ಷಣವಾಗಿ ನನ್ನ ಮನಸ್ಸಿಗೆ ಬಂತು ಉಳಿದ ವಚನಗಳು ಏನು ಹೇಳುತ್ತವೆಂದು ನನಗೆ ತಿಳಿದಿತ್ತು, ಆದರೆ ಅವುಗಳ ಮೇಲೆ ನೆಲೆಸಲು ನನಗೆ ಸಾಧ್ಯವಾಗಲಿಲ್ಲ ನನ್ನ ತಾಯಿಯು ಸಾಯುವಂತಹ ವಿಷಯವನ್ನು ಒಪ್ಪಿಕೊಳ್ಳಲು ಆಗಲಿಲ್ಲ. ''ಯೇಸುವೇ, ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ ಎಂಬುದಾಗಿ ನೀನು ಹೇಳಿದ್ದಿ'' ಎಂಬುದಾಗಿ ಪ್ರಾರ್ಥಿಸಿದೆನು. ಪುನ: ಪುನ: ಅದನ್ನೇ ಪುನರುಚ್ಚರಿಸಿದೆನು. ಅದ್ಭುತವಾಗಿ ನನ್ನ ತಾಯಿಯು ಬದುಕಬಹುದೆಂದು ನಾನು ನಿರೀಕ್ಷಿಸಿದ್ದೆನು. ಆದರೆ ಕೆಲವು ನಿಮಿಷಗಳಲ್ಲೇ, ನನ್ನ ತಾಯಿ ಇಹಲೋಕ ತ್ಯಜಿಸಿದರು. ಕಣ್ಣೀರು ತೊರೆಯಂತೆ ನಮ್ಮ ಕೆನೆಗಳ ಮೇಲೆ ಹರಿಯಿತು ಮತ್ತು ಉಸಿರುಕಟ್ಟುವ ಧ್ವನಿಗಳಿಂದ ''ಆತನೇ ಕರ್ತನು, ಆತನೇ ಕರ್ತನು, ಆತನು ಮರಣದಿಂದ ಎಬ್ಬಿಸಲ್ಪಟ್ಟನು ಮತ್ತು ಆತನೇ ಕರ್ತನು,'' ಎಂಬ ಪಲ್ಲವಿಯನ್ನು ಹಾಡಲು ನಾವು ಪ್ರಯತ್ನಿಸಿದೆವು.

ಆನಂತರದ ದಿವಸಗಳಲ್ಲಿ, ಮರಣ ಮತ್ತು ಅನಂತರದ ಜೀವನದ ಕುರಿತು ವಿವರಿಸುವ ಅನೇಕ ವಚನಭಾಗಗಳನ್ನು ನಾನು ಓದಿದೆನು. ಮರಣ ಮತ್ತು ಪರಲೋಕದ ಕುರಿತು ಸತ್ಯವೇದವು ಬೋಧಿಸುವುದೇನು ಎಂಬುದನ್ನು ನಂಬುವ

ಆಯ್ಕೆಯನ್ನು ನಾನು ಮಾಡಿದೆನು. ಇಂತಹ ವಚನಗಳು, ಸಂತೈಸುವಿಕೆ, ಸಮಾಧಾನ, ಪ್ರೋತ್ಸಾಹ ಮತ್ತು ನಿರೀಕ್ಷೆಗಳನ್ನು ತಂದವು. ಈ ಪುಸ್ತಕದಲ್ಲಿ ಕೆಲವನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ. ನಾವೆಲ್ಲರೂ ಸಹ, ಪ್ರಿಯವಾದವರನ್ನು ಅಗಲುವ ಮತ್ತು ಮರಣವನ್ನು ಕಣ್ಣೆದುರೇ ಕಾಣುವ ಒಂದಲ್ಲ ಒಂದು ಸಮಯ ಬರಬಹುದು. ಅಂತಹ ಸಮಯದಲ್ಲಿ ನಮಗೆ ದೇವರ ವಾಕ್ಯವು ತಂದಂತಹ ಸಂತೈಸುವಿಕೆಯನ್ನು ನಿಮಗೂ ತರಲಿ ಎಂಬುದು ನನ್ನ ಪ್ರಾರ್ಥನೆಯಾಗಿದೆ.

ಪ್ರತಿಯೊಬ್ಬ ಮನುಷ್ಯನು ಒಮ್ಮೆ ಸಾಯಲೇಬೇಕು. ದೇವರ ವಾಕ್ಯವು *''... ಒಂದೇ ಸಾರಿ ಸಾಯುವದೂ ಆಮೇಲೆ ನ್ಯಾಯತೀರ್ಪೂ ಮನುಷ್ಯರಿಗೆ ಹೇಗೆ ನೇಮಕವಾಗಿದೆಯೋ ...''* (ಇಬ್ರಿಯ 9:27). ಎಂಬುದಾಗಿ ಉಪದೇಶಿಸುತ್ತದೆ. ಇದು ಪೂರ್ವ ಜನ್ಮದ ಪಾಪಗಳ ಪ್ರಾಯಶ್ಚಿತ್ತದ ಸದಾವಕಾಶಕ್ಕೆ ಅನುವು ಮಾಡಿದ ಜನನ-ಮರಣ ಪುನರ್ಜನ್ಮದ ಚಕ್ರದ ಅಭಿಪ್ರಾಯವನ್ನು ಪುನರಾವತಾರವನ್ನು ವರ್ಜಿಸುತ್ತದೆ (ತೆಗೆದುಹಾಕುತ್ತದೆ). ಪ್ರತಿಯೊಬ್ಬ ವ್ಯಕ್ತಿಯು ಈ ಜೀವನವನ್ನು ಒಂದೇ ಸಾರಿ ಹಾದು ಹೋಗಬೇಕು. 1 ಥೆಸಲೋನಿಕದವರಿಗೆ 4:7 ರಲ್ಲಿ ಹೇಳಿರುವಂತೆ ''ಎತ್ತಲ್ಪಡುವವರನ್ನು'' ಹೊರತುಪಡಿಸಿ ಉಳಿದವರೆಲ್ಲರೂ— ಮರಣವನ್ನು ದಾಟಿ, ನಿತ್ಯತ್ವಕ್ಕೆ ಪ್ರವೇಶಿಸಬೇಕು.

ನಾವು ನಿತ್ಯತ್ವದ ಅಸ್ತಿತ್ವಹೊಂದಿದವರು, ನಮ್ಮ ಪ್ರಸ್ತುತ ಭೌತಿಕ ದೇಹವು ನಮ್ಮ ನಿತ್ಯತ್ವದ ಭಾಗಗಳಾದ ಆತ್ಮ ಮತ್ತು ಪ್ರಾಣದ ತಾತ್ಕಾಲಿಕ ವಾಸಸ್ಥಳವಾಗಿದೆ. ಮರಣವು ಒಂದು ಅಗಲಿಕೆ ಮಾತ್ರವಾಗಿದೆ. ಮರಣದ ಸಮಯದಲ್ಲಿ ತಾತ್ಕಾಲಿಕವಾಗಿ (ನಮ್ಮ ದೇಹಗಳಲ್ಲಿದ್ದ) ನಿತ್ಯತ್ವದ ನಮ್ಮ ಆತ್ಮ ಮತ್ತು ಪ್ರಾಣಗಳು ದೇಹವನ್ನು ತ್ಯಜಿಸುತ್ತದೆ (ಯಾಕೋಬನು 2:26). ವ್ಯಕ್ತಿಯ ಆತ್ಮ ಮತ್ತು ಪ್ರಾಣಗಳು ಪರಲೋಕ ಅಥವಾ ನರಕಗಳಲ್ಲಿ ಮುಂದುವರಿದು ಬದುಕಿರುತ್ತವೆ.

## ಈ ಜೀವಿತದ ಅನಂತರದ ಜೀವಿತ

**ಯೋಹಾನ 11:25,26**

**25 ಯೇಸು ಆಕೆಗೆ - ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ; ನನ್ನನ್ನು ನಂಬುವವನು ಸತ್ತರೂ ಬದುಕುವನು,**

**26 ಮತ್ತು ಬದುಕುತ್ತಾ ನನ್ನನ್ನು ನಂಬುವ ಪ್ರತಿಯೊಬ್ಬನು ಎಂದಿಗೂ ಸಾಯುವುದಿಲ್ಲ, ಇದನ್ನು ನಂಬುತ್ತೀಯಾ? ಎಂದು ಹೇಳಿದನು.**

ಸತ್ಯವೇದದ ಮೇಲೆ ನಂಬಿಕೆಯಿಡುವ ನಮಗೆ, ಮರಣವು ಅಂತ್ಯವಲ್ಲ ಎಂಬುದಾಗಿ ಖಚಿತವಾಗುತ್ತದೆ. ಯೇಸುವನ್ನು ನಂಬಿ ಸಾಯುವವರು, ಜೀವಿಸುವವರಾಗಿದ್ದಾರೆ. ಒಬ್ಬ ಕ್ರಿಸ್ತ ವಿಶ್ವಾಸಿಯು ಸತ್ತರೆ, ಆ ವಿಶ್ವಾಸಿಯ ಪ್ರಾಣ ಮತ್ತು ಆತ್ಮಗಳು ಯೇಸುವಿನೊಡನೆ ಇರಲು ಪರಲೋಕಕ್ಕೆ ಹೋಗುತ್ತವೆ. ಆ ವ್ಯಕ್ತಿಯ ದೇಹವು, ಜೀವಿತವಿಲ್ಲದ್ದಾಗಿ ಕಾಣಿಸಿದರೂ, ಆ ವ್ಯಕ್ತಿಯು ಬದುಕಿರುವವನಾಗಿರುತ್ತಾನೆ. ಸಾಮಾನ್ಯವಾಗಿ ನಮಗೆ ನೋಡಲು ಆಗದೇ ಇರುವ ಭಿನ್ನವಾದ ಪ್ರಪಂಚದಲ್ಲಿ ಆ ವ್ಯಕ್ತಿಯು ಜೀವಿಸುತ್ತಾನೆ. ಒಂದು ದಿನ *‘‘ ... ಯೇಸುವಿನಲ್ಲಿದ್ದುಕೊಂಡು ನಿದ್ರೆ ಹೋಗುವವರನು ಸಹ ದೇವರು ಆತನೊಡನೆ ಕರೆದುಕೊಂಡು ಬರುವನು ... ಆಗ ಕ್ರಿಸ್ತನಲ್ಲಿರುವ ಸತ್ತವರು ಮೊದಲು ಎದ್ದು ಬರುವರು’’* (1 ಥೆಸಲೋನಿಕದವರಿಗೆ 4:14,16).

ಈ ಕಾರಣಕ್ಕಾಗಿ ಸತ್ಯವೇದವು ಮರಣವನ್ನು *‘‘ನಿದ್ರೆ’’* ಎಂಬುದಾಗಿ ಪ್ರಸ್ತಾಪಿಸುತ್ತದೆ (1 ಥೆಸಲೋನಿಕದವರಿಗೆ 4:13-15). ನಮ್ಮ ಯಥಾದೃಷ್ಯರೂಪಣದಿಂದ ಸ್ವಾಭಾವಿಕ ದೃಷ್ಟಿಕೋನದಲ್ಲಿ, ಸತ್ತ ದೇಹವು ಕ್ರಿಯಾಶೂನ್ಯವಾಗಿದೆ ಎಂಬ ಕಾರಣದಿಂದ ಒಬ್ಬ ವ್ಯಕ್ತಿಯು ನಿದ್ರಿಸುವಾಗ ಇರುವಂತೆ ಮರಣವು ಸಹ ನಿದ್ರಿಸುವುದು ಎಂಬುದಾಗಿ ಪರಿಗಣಿಸಲ್ಪಟ್ಟಿದೆ. ಫಕ್ಕನೆ, ಆ ದಿನವು ಬರುವಾಗ ಮತ್ತು *‘‘ಧರ್ಮವೆಂಬ ಸೂರ್ಯನು’’* (ಮಲಾಕಿಯ 4:2) *‘‘ಲೋಕಕ್ಕೇ ಬೆಳಕು’’* (ಯೋಹಾನ 8:12) ಆದ ನಮ್ಮ ಕರ್ತನಾದ ಯೇಸು ಬರುವಾಗ, ಸತ್ತವರು ಅವರ *‘‘ನಿದ್ರೆ’’*ಯಿಂದ ಪುನರುತ್ಥಾನವಾದ ನೂತನ ದೇಹಗಳೊಡನೆ ಎದ್ದು ಬರುವರು.

ಆ ಕಾರಣದಿಂದ ನಮಗೆ ಈ ಜೀವಿತದ ಅನಂತರದ ಜೀವಿತವಿದೆ ಎಂಬುದಾಗಿ ಮನದಟ್ಟು ಆಗಿರುವುದರಿಂದ ಪ್ರಸ್ತುತದಲ್ಲಿ ಮತ್ತು ಪುನರುತ್ಥಾನದಲ್ಲಿ *‘‘ನಿರೀಕ್ಷೆಯಿಲ್ಲದ ಇತರರು ದುಃಖಿಸುವಂತೆ’’* (1 ಥೆಸಲೋನಿಕದವರಿಗೆ 4:13) ನಾವು ದುಃಖಿಸುವುದಿಲ್ಲ. ಸಂಶಯದ ನೆರಳೂ ಇಲ್ಲದೆ, ಕ್ರಿಸ್ತನಲ್ಲಿ ಸತ್ತ ನಮ್ಮ ಪ್ರಿಯರು ಈ ಕ್ಷಣದಲ್ಲೇ ಬದುಕಿದ್ದಾರೆ ಮತ್ತು ಚೆನ್ನಾಗಿದ್ದಾರೆ ಎಂಬುದು ನಮಗೆ ಗೊತ್ತಿದೆ. ಅವರ ಭೌತಿಕ ದೇಹಗಳು ಖಂಡಿತವಾಗಿ ಎಬ್ಬಿಸಲ್ಪಡುವವು ಮತ್ತು ನಾವು ಅವರನ್ನು ನೋಡುವೆವು. ಈ ಮರಣ—ಈ ಅಗಲಿಕೆ—ಇದು ತಾತ್ಕಾಲಿಕ ಮಾತ್ರ.

ಕರ್ತನೊಡನೆ ಇದ್ದಾರೆ ಅವರು ಕೈಯಿಂದ ಮಾಡದೇ ಇರುವ ನಿತ್ಯತ್ವದ ನಿವಾಸದಲ್ಲಿ ಇದ್ದಾರೆ.

## ನಿರ್ಗಮಿಸುವುದು ಎಷ್ಟೋ ಉತ್ತಮ

**ಫಿಲಿಪ್ಪಿಯವರಿಗೆ 1:20–24**

**[20] ಹೇಗೆಂದರೆ ನಾನು ಯಾವ ವಿಷಯದಲ್ಲಾದರೂ ನಾಚಿಕೆ ಪಡದೆ ಎಂದಿನಂತೆ ಈಗಲೂ ಸಹ ತುಂಬಾ ಧೈರ್ಯದಿಂದಿರುವುದರಿಂದ ಬದುಕಿದರೂ ಸರಿಯೇ ಸತ್ತರೂ ಸರಿಯೇ ನನ್ನ ದೇಹದ ಮೂಲಕ ಕ್ರಿಸ್ತನಿಗೆ ಮಹಿಮೆಯುಂಟಾಗಬೇಕೆಂದು ನನಗೆ ಬಹಳ ಅಭಿಲಾಷೆಯಿದೆ, ಹಾಗೆಯೇ ಆಗುವದೆಂದು ಭರವಸೆಯುಂಟು.**

**[22] ನನಗಂತೂ ಬದುಕುವುದೆಂದರೆ, ಕ್ರಿಸ್ತನೇ, ಸಾಯುವುದು ಲಾಭವೇ, ಶರೀರದಲ್ಲಿಯೇ ಬದುಕಬೇಕಾದಲ್ಲಿ ಕೆಲಸಮಾಡಿ ಫಲ ಹೊಂದಲು ನನಗೆ ಅನುಕೂಲವಾಗುವುದು, ಹೀಗಿರಲಾಗಿ ನಾನು ಯಾವದನ್ನಾರಿಸಿಕೊಳ್ಳಬೇಕೊ ನನಗೆ ತೋರದು.**

**[23] ಈ ಎರಡರ ನಡುವೆ ಸಿಕ್ಕಿಕೊಂಡಿದ್ದೇನೆ. ಇಲ್ಲಿಂದ ಹೋಗಿಬಿಟ್ಟು ಕ್ರಿಸ್ತನ ಜೊತೆಯಲ್ಲಿರಬೇಕೆಂಬುದೇ ನನ್ನ ಅಭಿಲಾಷೆ, ಅದು ಉತ್ತಮೋತ್ತಮ,**

**[24] ಆದರೆ ನಾನಿನ್ನೂ ಶರೀರದಲ್ಲಿ ವಾಸವಾಡಿಕೊಂಡಿರುವುದೇ ನಿಮಗೋಸ್ಕರ ಬಹು ಅವಶ್ಯವಾದದ್ದು.**

ಮೇಲ್ಕಂಡ ನಿಜ ವಿಷಯದ ದೃಷ್ಟಿಯಲ್ಲಿ ವಿಶ್ವಾಸಿಗಳಾದ ನಮಗೆ ''ಸಾಯುವುದು ಲಾಭವೇ'' (ಫಿಲಿಪ್ಪಿಯವರಿಗೆ 1:21) ಅಗಲಿ ಕ್ರಿಸ್ತನೊಂದಿಗಿರವುದು ''ಎಷ್ಟೋ ಉತ್ತಮ'' (ಫಿಲಿಪ್ಪಿಯವರಿಗೆ 1:23)ಮರಣವು ಅಪಜಯವಲ್ಲ. ಮರಣವು ನಿರಾಶೆಯನ್ನು ಉಂಟು ಮಾಡುವ ಸಮಯವಲ್ಲ. ಮರಣವು ಬಹಳ ಉತ್ತಮವಾದದ್ದಕ್ಕೆ ಪ್ರವೇಶ ನೀಡುತ್ತದೆ ಮತ್ತು ಭೂಮಿಯ ಮೇಲಿನ ನಮ್ಮ ಒಂದು ಭವ್ಯ ತಾಸಿಗಿಂತ ಅಧಿಕವಾದ ಮಹಿಮೆಯುಳ್ಳದ್ದಾಗಿರುತ್ತದೆ. ಕ್ರಿಸ್ತನಲ್ಲಿ ಮರಣಹೊಂದಿದ ನಮ್ಮ ಪ್ರಿಯರು ನಾವು ಅನುಭವಿಸದೇ ಇರುವ ವಿಷಯಗಳನ್ನು ಅನುಭವಿಸುತ್ತಿದ್ದಾರೆ. ಹೌದು, ಅವರ ನಿರ್ಗಮನದ ನಂತರ ಅವರ ಅನುಪಸ್ಥಿತಿಯ ಅನುಭವ ಉಂಟಾಗುತ್ತದೆ. ನಮ್ಮ ಹೃದಯವು ಅವರ ಸಹವಾಸ (ಒಡನಾಟ), ಅವರ ಅನ್ಯೋನ್ಯತೆ, ಮತ್ತು ನಾವು ಹಂಚಿಕೊಂಡಂತಹ ಸಮಯಗಳನ್ನು ಕಳೆದುಕೊಂಡಂತೆ ಮಾಡುತ್ತದೆ ಆದರೆ ಅಂತಹ ನೋವು, ಅಂತಹ ಹಂಬಲವು ನಾವು ಅನುಭವಿಸುವುದಾಗಿದೆ. ಆದರೆ ಮತ್ತೊಂದೆಡೆ ನಮ್ಮ ಪ್ರಿಯರು ಮಹಾ ಸಂತೋಷವನ್ನು ಅನುಭವಿಸುತ್ತಿರುತ್ತಾರೆ ಅವರು ಕ್ರಿಸ್ತನ ಪ್ರಸನ್ನತೆಯಲ್ಲಿರುತ್ತಾರೆ. ಇಂತಹ ಯಥಾದೃಷ್ಟ ರೂಪದ ದೃಷ್ಟಿಕೋನದಲ್ಲಿ, ಅವರ ಅಗಲುವಿಕೆಯನ್ನು ನೋಡಿ ಅವರು ಗಳಿಸಿದ ಲಾಭದಿಂದ ನಮ್ಮ ವೈಯಕ್ತಿಕ ದುಃಖಗಳನ್ನು ಬದಿಗಿಟ್ಟು

ಅವರ ಸಂತೋಷದಲ್ಲಿ ನಾವು ಸಂತೋಷಪಡಬೇಕು!!

## ಪರಲೋಕವು ಒಂದು ಅದ್ಭುತವಾದ ಸ್ಥಳ

**ಯೋಹಾನ 14:1,2**

**1 ನಿಮ್ಮ ಹೃದಯವು ಕಳವಳಗೊಳ್ಳದೆ ಇರಲಿ; ದೇವರನ್ನು ನಂಬಿರಿ, ನನ್ನನ್ನು ನಂಬಿರಿ.**
**2 ನನ್ನ ತಂದೆಯ ಮನೆಯಲ್ಲಿ ಬಹಳ ಬಿಡಾರಗಳು ಅವೆ; ಇಲ್ಲದಿದ್ದರೆ ನಿಮಗೆ ಹೇಳುತ್ತಿದ್ದೆನು; ನಿಮಗೆ ಸ್ಥಳವನ್ನು ಸಿದ್ದಮಾಡುವದಕ್ಕೆ ಹೋಗುತ್ತೇನಲ್ಲಾ.**

**ಯೋಹಾನ 17:24**

**ತಂದೆಯೇ, ನೀನು ಯಾರನ್ನು ನನಗೆ ಕೊಟ್ಟಿಯೋ ಅವರು ನಾನಿರುವ ಸ್ಥಳದಲ್ಲಿ ನನ್ನ ಕೂಡ ಇದ್ದುಕೊಂಡು ಲೋಕವು ಹುಟ್ಟುವದಕ್ಕಿಂತ ಮುಂಚೆಯೇ ನೀನು ನನ್ನನ್ನು ಪ್ರೀತಿಸಿ ನನಗೆ ಕೊಟ್ಟಿರುವ ಮಹಿಮೆಯನ್ನು ನೋಡಬೇಕೆಂದು ಇಚ್ಛೈಸುತ್ತೇನೆ.**

ಯೇಸುವನ್ನು ನಂಬಿದವರಾಗಿ ನಮ್ಮಲ್ಲಿ ಹೆಚ್ಚಿನವರು ಕರ್ತನನ್ನು ನೋಡಿಲ್ಲ ಮತ್ತು ಆತನ ಸ್ವರವನ್ನು ಕಿವಿಯಾರ ಕೇಳಿಲ್ಲ. ನಾವು ಆತನ ಪ್ರಸನ್ನತೆಯನ್ನು ಅನುಭವಿಸಿರಬಹುದು ಪವಿತ್ರಾತ್ಮನ ನಡಸುವಿಕೆಯನ್ನು ಅನುಭವಿಸಿರಬಹುದು ದೇವರ ಒಳ್ಳೆಯ ವಾಕ್ಯವನ್ನು ರುಚಿಸಿರಬಹುದು ಮತ್ತು ಬರಲಿರುವ ಯುಗದ ಬಲವನ್ನು ಅನುಭವಿಸುತ್ತಿರಬಹುದು (ಇಬ್ರಿಯ 6:5) ಹಾಗಿದ್ದಾಗ್ಯೂ, ಕ್ರಿಸ್ತನಲ್ಲಿ ವಿಶ್ವಾಸಿಗಳು ಸತ್ತ ಕ್ಷಣವೇ, ಅವರು ಕ್ರಿಸ್ತನೊಂದಿಗಿರಲು ಹೋಗುತ್ತಾರೆ, ಆತನು ಇರುವಲ್ಲಿ ಅವರು ಇರುತ್ತಾರೆ ಮತ್ತು ಆತನ ಮಹಿಮೆಯನ್ನು ನೋಡಲು ಶಕ್ತರಾಗುತ್ತಾರೆ. ಅವರು ಬಿಳೀ ವಸ್ತ್ರಗಳನ್ನು ಧರಿಸಿಕೊಳ್ಳುತ್ತಾರೆ. (ಪ್ರಕಟನೆ 3:5). ಯಾವಾಗಲೂ ಮತ್ತು ಎಂದಿಗೂ ಜೀವಿಸುವವನಾದ, ಸಿಂಹಾಸನಾರೂಢನಾದಾತನಿಗೆ ಪರಲೋಕದ ಜೀವಿಗಳು ಆರಾಧಿಸುವುದನ್ನು ಮತ್ತು ಮಹಿಮೆಯನ್ನೂ, ಘನತೆಯನ್ನೂ, ಸಲ್ಲಿಸುವುದನ್ನು ಮತ್ತು ಆತನಿಗೆ ಕೃತಜ್ಞತೆ ಸಲ್ಲಿಸುವುದನ್ನೂ ಅವರು ನೋಡುತ್ತಾರೆ (ಪ್ರಕಟನೆ 4:9). ಅವರು ಇಂತಹ ಕೊನೆಯಿಲ್ಲದ ಆರಾಧನೆಯಲ್ಲಿ ಸೇರುತ್ತಾರೆ. ಮೊದಲು ಹೋದಂತಹ ಮಿಲಿಯನ್‌ಗಟ್ಟಲೆ ಜನರನ್ನು ಅವರು ಸಂಧಿಸುತ್ತಾರೆ. ಮತ್ತು ಅಲ್ಲಿ ನಾವು ನೋಡಿದಂತಹ ಮತ್ತು ನೋಡದೇ ಇರುವಂತಹ ಪರಲೋಕದ ಅಧಿಕ ಮತ್ತು ಅತ್ಯಾಧಿಕ ಮಹಿಮೆಯು ಇರುತ್ತದೆ! ಕ್ರಿಸ್ತನಲ್ಲಿ ಅಗಲಿದ ನಮ್ಮ ಪ್ರಿಯರಾದವರು ಅತ್ಯದ್ಭುತ ಸ್ಥಳವಾದ ಪರಲೋಕದಲ್ಲಿರುತ್ತಾರೆ!

## ಇಂತಹ ವಚನಗಳಿಂದ ಒಬ್ಬರನೊಬ್ಬರು ಸಂತೈಸಿರಿ

**1 ಥೆಸಲೋನಿಕದವರಿಗೆ 4:16-18**

**[16] ಕರ್ತನು ತಾನೇ ಆಜ್ಞಾಘೋಷದೊಡನೆಯೂ ಪ್ರಧಾನ ದೂತನ ಶಬ್ಧದೊಡನೆಯೂ ದೇವರ ತುತ್ತೂರಿ ಧ್ವನಿಯೊಡನೆಯೂ ಆಕಾಶದಿಂದ ಇಳಿದು ಬರುವನು; ಆಗ ಕ್ರಿಸ್ತನಲ್ಲಿರುವ ಸತ್ತವರು ಮೊದಲು ಎದ್ದು ಬರುವರು**

**[17] ಆ ಮೇಲೆ ಜೀವದಿಂದುಳಿದಿರುವ ನಾವು ಅಂತರಿಕ್ಷದಲ್ಲಿ ಕರ್ತನನ್ನು ಎದುರುಗೊಳ್ಳುವದಕ್ಕಾಗಿ ಅವರ ಸಂಗಡಲೇ ಮೇಘವಾಹನರಾಗಿ ಫಕ್ಕನೆ ಒಯ್ಯಲ್ಪಡುವೆವು; ಹೀಗಾಗಿ ನಾವು ಸದಾಕಾಲವೂ ಕರ್ತನ ಜೊತೆಯಲ್ಲಿರುವೆವು.**

**[18] ಆದಕಾರಣ ಈ ಮಾತುಗಳಿಂದ ಒಬ್ಬರನ್ನೊಬ್ಬರು ಸಂತೈಸಿರಿ.**

ಕರ್ತನು ಮರಣ, ಪರಲೋಕ, ಪುನರುತ್ಥಾನ ಮತ್ತು ಇಲ್ಲಿನ ಜೀವಿತ ಮುಗಿದ ಮೇಲಿನ ಸತ್ಯಾಂಶಗಳ ಬಗ್ಗೆ ಪ್ರಕಟಿಸಿಲು ನಾವು ನಿರೀಕ್ಷೆಯುಳ್ಳ ಜನರಾಗಿರಬೇಕೆಂಬುದು ಒಂದು ಪ್ರಾಥಮಿಕ ಕಾರಣವಾಗಿದೆ. ದೇವರ ವಾಕ್ಯದ ಆಧಾರದ ಮೇಲೆ ಸ್ಥಾಪಿಸಲ್ಪಟ್ಟಂತಹ ನಿರೀಕ್ಷೆಯೊಡನೆ ನಾವು ಒಬ್ಬರನೊಬ್ಬರು ಸಂತೈಸಬಹುದು. ನೀವು ಕರ್ತನ ಸೇವೆಯಲ್ಲಿ (1 ಕೊರಿಂಥದವರಿಗೆ 15:58) ಮುಂದುವರೆಯಲು ಬಲಗೊಳ್ಳಲು, ಧೈರ್ಯಹೊಂದಲು ಸಂತೈಸಲ್ಪಡಲು ಇಂತಹ ವಚನಗಳು ಕೊಡಲ್ಪಟ್ಟಿವೆ. ಹಾಗಿದ್ದಾಗ್ಯೂ ನಾವು ವಚನಗಳನ್ನು ನಂಬುವ ಆಯ್ಕೆಮಾಡದಿದ್ದರೆ ಮತ್ತು ಅವುಗಳನ್ನು ಅನುಸರಿಸದಿದ್ದರೆ ನಾವು ಸಂತೈಸುವಿಕೆಯ ಅನುಭವ ಪಡೆಯಲು ಮತ್ತು ಒಲಿಸಿಕೊಳ್ಳಲು ಆಗುವುದಿಲ್ಲ. ಸತ್ಯವೇದದ ವಚನಗಳು ನಮಗೆ ಬೋಧಿಸುವವುಗಳಿಗೆ ನಮ್ಮ ನಂಬಿಕೆಗಳು, ನಮ್ಮ ನಡವಳಿಕೆಗಳು ಮತ್ತು ನಮ್ಮ ಆಲೋಚನೆಗಳನ್ನು ನಾವು ಸರಿ ಹೊಂದಿಸಿಕೊಳ್ಳುವುದು ಅವಶ್ಯಕ.

ನಮ್ಮಲ್ಲಿ ಹಲವರು, ದುಃಖದ ಸಮಯಗಳಲ್ಲಿ ದೇವರ ವಾಕ್ಯಗಳ ಸಂತೈಸುವಿಕೆಗಿಂತ ಮನುಷ್ಯರ ಕನಿಕರವನ್ನು ಇಷ್ಟಪಡುತ್ತೇವೆ. ನಾವು ಪಡೆಯುವ ಗಮನ ಮತ್ತು ಜನರು ಮಾಡುವ ಕನಿಕರದ ಭಾವನಾಭಿನಯಗಳಲ್ಲಿ ನಾವು ಸಂತೋಷ ಪಡುತ್ತೇವೆ. ಆದಾಗ್ಯೂ ಜನರು ಅವರ ಕನಿಕರವನ್ನು ಯಾವಾಗಲೂ ಮುಂದುವರೆದು ಒದಗಿಸಲು ಸಾಧ್ಯವಿಲ್ಲ ಅವರು ಅದನ್ನು ನಿಲ್ಲಿಸಿದಾಗ ನಾವು, ಯಾರೂ ಸಹ ನಮ್ಮ ಬಗ್ಗೆ ಕಾಳಜಿ ವಹಿಸುತ್ತಿಲ್ಲ, ನಾನು ಹಾದು ಹೋಗುತ್ತಿರುವ ಕಠಿಣ ಪರಿಸ್ಥಿತಿ ಯಾರಿಗೂ ತಿಳಿಯುತ್ತಿಲ್ಲ ಎಂಬುದಾಗಿ ಅಂದುಕೊಳ್ಳುತ್ತೇವೆ. ಆದಾಗ್ಯೂ, ನಾವು ದೋಷದಲ್ಲಿದ್ದೇವೆಂಬದು ಸತ್ಯಾಂಶವಾಗಿರುತ್ತದೆ. ದೇವರ ವಾಕ್ಯಗಳ ಸಂತೈಸುವಿಕೆಯ ಮೇಲೆ ಆತುಕೊಳ್ಳದೇ, ಜನರ ಕನಿಕರದ

ಮೇಲೆ ಆತುಕೊಳ್ಳುವುದರಲ್ಲಿ ನಾವು ಬಲಹೀನರಾಗುತ್ತೇವೆ. ನಾವು ಇಂತಹ ಬಲಹೀನತೆಯಿಂದ ಹೊರಬರಬೇಕು. ನಾವು ದೇವರ ವಾಕ್ಯವನ್ನು ಧ್ಯಾನಿಸಲು ಮತ್ತು ಆತನ ವಚನ ಮತ್ತು ಆತನಿಂದ ಬಲಹೊಂದಲು ನಮ್ಮನ್ನು ನಾವೇ ಕ್ರಮ (ಶಿಸ್ತು)ಗೊಳಿಸಿಕೊಳ್ಳಬೇಕು.

## ಉತ್ತರ ಸಿಗದ ಪ್ರಶೆಗಳು

ಹಲವು ಬಾರಿ, ಇಂತಹ ಸಮಯುಗಳಲ್ಲಿ ಅನೇಕ ಪ್ರಶೆಗಳು ಉದ್ಭವಿಸಿ ಉತ್ತರವಿಲ್ಲದೆ ಉಳಿದುಕೊಳ್ಳುತ್ತವೆ. ಯಾರಾದರೂ ಒಬ್ಬರು ಯೌವ್ವನ ಪ್ರಾಯದಲ್ಲೇ ಸತ್ತದ್ದೇಕೆ? ಅವರು ಅನಾರೋಗ್ಯಗಳಿಂದ, ಅಪಘಾತಗಳಲ್ಲಿ ಅಥವಾ ಇತರ ಬೇರೆ ದುರ್ಘಟನೆಗಳಿಂದ ಸತ್ತದ್ದೇಕೆ? ಅವರು ದೇವರ ಬಲದಿಂದ ಬಿಡುಗಡೆ ಹೊಂದಲು ಅಥವಾ ರಕ್ಷಿಸಲ್ಪಡಲು ಅಥವಾ ಗುಣಹೊಂದಲು ಸಾಧ್ಯವಾಗಲಿಲ್ಲವೇಕೆ? ಏಕೆ? ಏಕೆ? ಏಕೆ? ಇವುಗಳು ಅಂತ್ಯವಿಲ್ಲದ ಪ್ರಶ್ನೆಗಳಂತೆ ಕಾಣಿಸುತ್ತವೆ ನಾವು ದೇವರೊಡನೆ ಪಕ್ವತೆಯಲ್ಲಿ ನಡೆಯುವಾಗ, ಪರಲೋಕದ ಈ ಪಕ್ಕದಲ್ಲಿ ಉತ್ತರವಿಲ್ಲದ ಅನೇಕ ಪ್ರಶೆಗಳು ಹಾಗೆಯೇ ಉಳಿದುಕೊಳ್ಳುತ್ತವೆ ಎಂಬ ವಿಷಯವನ್ನು ಅಂಗೀಕರಿಸಿಕೊಳ್ಳಬೇಕು. ಖಂಡಿತವಾಗಿಯೂ ''ಪ್ರಕಟನೆಯ ಜ್ಞಾನದ ಕೊರತೆ,'' ''ನಂಬಿಕೆಯ ಕೊರತೆ'' ಮುಂತಾದವುಗಳ ಬಗ್ಗೆ ಉತ್ತರ ಒದಗಿಸಲು ಯಾವಾಗಲೂ ಪ್ರಯತಿಸಬಹುದು ಆದರೆ ಇಂತಹ ಎಲ್ಲಾ ಉತ್ತರಗಳು ಉತ್ತಮವಾಗಿರುವುದಾದರೂ ನಮಗೆ ಉತ್ತರ ಗೊತ್ತಿಲ್ಲದ ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸುವ ಪ್ರಯತ್ನ ಮಾತ್ರ ಎಂದು ಖಚಿತವಾಗುವುದು. ಪ್ರತಿಯೊಂದು ಪರಿಸ್ಥಿತಿಯು ಅನೇಕ ಭಿನ್ನತೆಗಳೊಡನೆ ವಿಶಿಷ್ಟವಾಗಿದೆ ಮತ್ತು ನಮಗೆ ತಿಳಿಯದವುಗಳಾಗಿವೆ. ಈಗ ನಮಗೆ ಒಂದು ಭಾಗ ಮಾತ್ರ ಗೊತ್ತಿದೆ. ಆದರೆ ಪೂರ್ಣವಾದದ್ದು ಬಂದಾಗ–ನಮಗೇನು ತಿಳಿದಿದೆಯೋ ಅದನ್ನೇ ತಿಳಿದಿರುತ್ತೇವೆ. (1 ಕೊರಿಂಥದವರಿಗೆ 13:10,12). *''ರಹಸ್ಯವಾದವುಗಳು ನಮ್ಮ ದೇವರಾದ ಯೆಹೋವನವು; ಆದರೆ ಆತನಿಂದ ಪ್ರಕಟವಾದವುಗಳು ಸದಾ ನಮ್ಮಮತ್ತು ನಮ್ಮ ಸಂತತಿಯವರ ಪಾಲಾಗಿರುವರಿಂದ ನಾವು ಈ ಧರ್ಮಶಾಸ್ತ್ರದ ನಿಯಮಗಳನ್ನು ಅನುಸರಿಸಿ ನಡೆಯಬೇಕಾದ ಹಂಗಿನಲ್ಲಿದ್ದೇವೆ''* (ಧರ್ಮೋಪದೇಶಕಾಂಡ 29:29). ಅಂತಹ ಪ್ರಶೆಗಳಿಗೆ ಸರಿಯಾದ ಉತ್ತರವಿಲ್ಲ ಎಂಬ ವಿಷಯವನ್ನು ನಾವು ಅಂಗೀಕರಿಸುವುದು ಜಾಣತನವಾಗಿರುತ್ತದೆ. ಹಾಗಿದ್ದರೂ, ನಮಗೆ ಗೊತ್ತಿರುವ ಅನೇಕ ವಿಷಯಗಳೊಡನೆ ನಾವು ಮುಂದುವರೆಯುತ್ತಾ ಜೀವಿಸಬೇಕಾಗಿರುತ್ತದೆ.

## ನಾವು ಇನೂ ಇಲ್ಲಿ ಭೂಮಿಯ ಮೇಲಿರುವಾಗ

**2 ಕೊರಿಂಥದವರಿಗೆ 5:9,10**

**9 ಆದದರಿಂದ ನಾವು ದೇಹವೆಂಬ ಮನೆಯಲ್ಲಿದ್ದರೂ ಸರಿಯೇ, ಅದನ್ನು ಬಿಟ್ಟಿದ್ದರೂ ಸರಿಯೇ,**
**ಕರ್ತನಿಗೆ ಮೆಚ್ಚುವವರಾಗಿರಬೇಕೆಂಬುದೇ ನಮ್ಮ ಗುರಿಯಾಗಿದೆ.**
**10 ಯಾಕೆಂದರೆ ಪ್ರತಿಯೊಬ್ಬನು ತನ ದೇಹದ ಮೂಲಕ ನಡೆಸಿದ ಒಳ್ಳೇದ್ದಕ್ಕಾಗಲಿ ಕೆಟ್ಟದ್ದಕ್ಕಾಗಲಿ**
**ಸರಿಯಾಗಿ ಪ್ರತಿಫಲವನ್ನು ಹೊಂದುವದಕ್ಕೋಸ್ಕರ ನಾವೆಲ್ಲರೂ ಕ್ರಿಸ್ತನ ನ್ಯಾಯಾಸನದ ಮುಂದೆ**
**ಯಥಾಸ್ಥಿತಿಯಲ್ಲಿ ಕಾಣಿಸಿಕೊಳ್ಳಬೇಕು.**

**ಇಬ್ರಿಯರಿಗೆ 12:1**

**ಆದಕಾರಣ ಇಷ್ಟು ಮಂದಿ ಸಾಕ್ಷಿಯವರು ಮೇಘದೋಪಾದಿಯಲ್ಲಿ ನಮ್ಮ ಸುತ್ತಲು ಇರುವದರಿಂದ ನಮಗೆ ಅಭ್ಯಂತರ ಮಾಡುವ ಎಲ್ಲಾ ಭಾರವನ್ನು ಹತ್ತಿಕೊಳ್ಳುವ ಪಾಪವನೂ ನಾವು ತೆಗೆದಿಟ್ಟು ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವ ಯೇಸುವಿನ ಮೇಲೆ ದೃಷ್ಟಿಯಿಟ್ಟು ನಮಗೆ ನೇಮಕವಾದ ಓಟವನ್ನು ಸ್ಥಿರ ಚಿತ್ತದಿಂದ ಓಡೋಣ.**

ನಮಗಿಂತಲೂ ಮೊದಲು ಸತ್ತು ನಮ್ಮನ್ನು ಬಿಟ್ಟು ಹೋದವರು, ಅವರ ಜೀವಿತಗಳ ಸಾಕ್ಷಿಯನ್ನು ನಮಗೆ ಬಿಟ್ಟು ಹೋಗಿದ್ದಾರೆ. ದೇವರ ರಾಜ್ಯಕ್ಕಾಗಿ ಮಾಡಬೇಕಾದ್ದನ್ನು ಅವರು ಮಾಡಿದ್ದಾರೆ ಮತ್ತು ಈ ದಿನ ಪ್ರಾಯಶಃ ಪರಲೋಕದ ಮಂಟಪಗಳಲ್ಲಿ ನಿಂತು ಅವರು ಕೆಳಗೆ ಇನೂ ಜೀವಿತದ ಓಟ ಓಡುತ್ತಿರುವ ನಮ್ಮನ್ನು ನೋಡುತ್ತಿದ್ದಾರೆ. ಆದುದರಿಂದ, ನಾವು ದೇವರಿಂದ ನೇಮಕವಾದ ಓಟವನ್ನು ಸ್ಥಿರ ಚಿತ್ತದಿಂದ ಓಡೋಣ. ನಾವು ಮಾಡುವಂತಹ ಪ್ರತಿಕೆಲಸದಲ್ಲೂ ಆತನನ್ನು ಮೆಚ್ಚಿಸುವ ಪ್ರಯತಗಳನ್ನು ಮಾಡಬೇಕು. ನಮ್ಮ ದುಃಖ ಅಥವಾ ನೋವಿನ ಸ್ಥಳಗಳಲ್ಲಿ ನಾವು ಉಳಿಯಬಾರದು. ನಮ್ಮ ಪ್ರಿಯರಾದವರಿಗೆ ವಿದಾಯ ಹೇಳಿದ ಸ್ಥಳವನ್ನು ಬಿಟ್ಟು ಎದ್ದು ದೇವರ ಕರೆಗನುಗುಣವಾಗಿ ಮುಂದುವರೆಯುತ್ತಿರಬೇಕು. ಯಾಕೆಂದರೆ ಒಂದು ದಿನ, ನಾವೆಲ್ಲರೂ ಭೂಮಿಯ ಮೇಲೆ ಆತನ ರಾಜ್ಯಕ್ಕಾಗಿ ಮಾಡಿದ ಎಲ್ಲಾ ಕಾರ್ಯಗಳೊಡನೆ ಕ್ರಿಸ್ತನಲ್ಲಿ ನಮಗಿಂತಲೂ ಮೊದಲು ಹೋದವರೊಡನೆ ಕರ್ತನ ಮುಂದೆ ನಿಂತುಕೊಳ್ಳುತ್ತೇವೆ. ನಮಗಿಂತಲೂ ಮೊದಲು ಹೋದವರು ನಮ್ಮನ್ನು ನಂಬಿಗಸ್ತರೆಂದು ನಿರ್ಧರಿಸಲಿ!

ನಾವೆಲ್ಲರೂ, ಒಂದು ಅಥವಾ ಇನ್ನೊಂದು ವೇಳೆಯಲ್ಲಿ ಮರಣವನ್ನು ಮುಖಾಮುಖಿಗೊಳ್ಳುತ್ತೇವೆ. ಮತ್ತು ಪ್ರಿಯವಾದವರನ್ನು ಅಗಲುವ ಸ್ಥಿತಿ ಎದುರಿಸುತ್ತೇವೆ. ಸತ್ಯವೇದವು ಮರಣ ಮತ್ತು ಇಲ್ಲಿನ ಅನಂತರದ ಜೀವಿತದ ಬಗ್ಗೆ ವಿವರಿಸುತ್ತದೆ. ಸತ್ಯವೇದವು ಮರಣ ಮತ್ತು ಪರಲೋಕದ ಕುರಿತು ಬೋಧಿಸುವುದನ್ನು ನಂಬುವ ಆಯ್ಕೆಯನ್ನು ನಾನು ಮಾಡಿಕೊಂಡಿದ್ದೇನೆ. ಇದು ನನಗೆ ಬಹಳ ಬಲ, ಸಂತೈಸುವಿಕೆ, ಶಾಂತಿ, ಪ್ರೋತ್ಸಾಹ ಮತ್ತು ನಿರೀಕ್ಷೆಯನ್ನು ತಂದಿತು. ಈ ಪುಸ್ತಕದಲ್ಲಿ ಇವುಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ. ನನಗೆ ಸಂತೈಸುವಿಕೆ ತಂದಂತಹ ದೇವರ ವಾಕ್ಯದ ವಚನಗಳು ನಿಮ್ಮ ಅವಶ್ಯಕತೆಯ ವೇಳೆಯಲ್ಲಿ ನಿಮಗೂ ಸಂತೈಸುವಿಕೆ (ಸಾಂತ್ವನ) ತರಲಿ!

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: apcwo.org